**ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ ನ್ಯಾಯಾಲಯ**
**ಹಿರೇಕೆರೂರು**

ಸಿ.ಸಿ. ನಂಃ 676/2022

ಸಿ.ಡಬ್ಲ್ಯೂಃ 4 ಪಿ.ಡಬ್ಲ್ಯೂಃ 2

ಸಾಕ್ಷಿದಾರರ ಹೆಸರುಃ -ಚಂದ್ರಗೌಡ ತಂದೆ ಬಸನಗೌಡ ದಳವಾಯಿ

ವಯಸ್ಸುಃ - 65 ವರ್ಷ

ಉದ್ಯೋಗ - ವ್ಯವಸಾಯ

ವಾಸಸ್ಥಳ - ನೂಲಗೇರಿ

ದಿನಾಂಕಃ 27-02-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ - ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಗಳು ಪರಿಚಯ ಇರುತ್ತಾರೆ. ಚಾಸಾ-1 ನನ್ನ ಹೆಂಡತಿ. ಚಾಸಾ-5 ಹಾಗೂ 7 ರವರು ನನ್ನ ಸೊಸೆ ಮತ್ತು ಮಗ. ಚಾಸಾ-6 ಪರಿಚಯ ಇರುತ್ತಾನೆ. ನೂಲಗೇರಿ ಗ್ರಾಮದ ರಿ. ಸ ನಂಃ 3/1 ಕ್ಷೇತ್ರ 17 ಗುಂಟೆಯಲ್ಲಿ ದಾರಿಯನ್ನು 20 ವರ್ಷದಿಂದ ನಮ್ಮ ಉಳಿದ ಜಮೀನಿಗೆ ಹೋಗಲು ಮಾಡಿಕೊಂಡಿದ್ದು, 1 ಮತ್ತು 6 ನೇ ಆರೋಪಿಗಳು ಸದರಿ ದಾರಿಗೆ ತಿಪ್ಪೇಯನ್ನು ಹಾಕುತ್ತಾರೆ. ಸದರಿ ತಿಪ್ಪೆಯನ್ನು ಹಾಕಬಾರದು ಎಂದು ನಾವು ಅವರಿಗೆ ಹಲವಾರು ಹೇಳಿರುತ್ತೇವೆ. ದಿಃ 24-08-2021 ರಂದು ಚಾಸಾ-7 ರವರು ಟಿಲ್ಲರು ತೆಗೆದುಕೊಂಡು ಹೊಲಕ್ಕೆ ಹೊರಟಿದ್ದ. ದಾರಿಯಲ್ಲಿ ಹಾಕಿದ ಸಗಣಿಗೆ ಜಾರಿ ಟಿಲ್ಲರ ಬಿದ್ದಿರುತ್ತದೆ. ಸದರಿ ದಾರಿಗೆ ಸರಿ ಮಾಡಿಲು ನಾವು ಮಣ್ಣನ್ನು ಹಾಕಿಸುತ್ತಿದ್ದೇವು. ಅದೇ ದಿನ ಸಾಯಂಕಾಲ 5-00 ಗಂಟೆಗೆ 1 ನೇ ಆರೋಪಿ ಆ ಸ್ಥಳಕ್ಕೆ ಬಂದು ತಿಪ್ಪೆ ಇರುವುದು ಕಣ್ಣಿಗೆ ಕಾಣುವುದಿಲ್ಲ ಏನೋ ಮಿಂಡ್ರಿ ಮಗನ ಎಂದು ಅವಾಚ್ಯವಾಗಿ ನನಗೆ ಬೈದಿರುತ್ತಾನೆ. ನಾನು ನನ್ನ ಹೊಲಕ್ಕೆ ಹೋಗುವ ದಾರಿಯನ್ನು ಸರಿ ಮಾಡಿಕೊಳ್ಳುತ್ತೇನೆ ಎಂದು ಹೇಳಿರುತ್ತೇನೆ ಎಂದು ಅದರೂ ದೊಣ್ಣೆಯಿಂದ ಬೆನ್ನಿಗೆ, ಕಾಲಿಗೇ, ಹೊಟ್ಟೆಗೆ ಹೊಡೆದಿರುತ್ತಾನೆ. ಜಗಳ ವಿಷಯ ಕೇಳಿ ಚಾಸಾ-1 ಹಾಗೂ 5 ರವರು ಸ್ಥಳಕ್ಕೆ ಬಂದಿರುತ್ತಾರೆ. ನಂತರ ಉಳಿದ ಆರೋಪಿಗಳು ಗುಂಪು ಕಟ್ಟಿಕೊಂಡು ಘಟನಾ ಸ್ಥಳಕ್ಕೆ ಬಂದಿರುತ್ತಾರೆ. 1, 2 ಮತ್ತು 11 ನೇ ಆರೋಪಿಗಳು ಚಾಸಾ-1 ರವರ ಸೀರೆಯನ್ನು ಹಿಡಿದು ಜಗ್ಗಿರುತ್ತಾರೆ. ಚಾಸಾ-5 ರವರಿಗೆ 6 ಮತ್ತು 10 ನೇ ಆರೋಪಿಗಳು ಸೀರೆಯನ್ನು ಹಿಡಿದು ಜಗ್ಗಿ ನೆಲಕ್ಕೆ ಕೆಡವಿ ಕೈಯಿಂದ ಮೈ ಕೈಗೆ ಹೊಡೆದಿರುತ್ತಾರೆ. ಚಾಸಾ-6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ. ನಂತರ ಆರೋಪಿಗಳೆಲ್ಲರು ಇಂದು ಉಳಿದುಕೊಂಡಿ ಇನ್ನೊಂದು ಸಲ ಈ ರೀತಿ ತಂಟೆಗೆ ಬಂದರೆ ಜೀವ ಸಹಿತ ಬಿಡುವುದಿಲ್ಲವೆಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ದಿಃ 25-08-2021 ರಂದು ಹಿರೇಕೆರೂರು ಸರ್ಕಾರಿ ಆಸ್ಪತ್ರೆಗೆ ಬೆಳಿಗ್ಗೆ 11-00 ಗಂಟೆಗೆ ಬಂದು ನಾನು, ಚಾಸಾ-1

ಹಾಗೂ 5 ರವರು ಸೇರಿ ಚಿಕಿತ್ಸೆಯನ್ನು ಪಡೆದುಕೊಂಡಿರುತ್ತೇವೆ. ದಿಃ 21-09-2021 ರಂದು ಚಾಸಾ-1 ರವರು ನ್ಯಾಯಾಲಯಕ್ಕೆಬಂದು ಪಿರ್ಯಾದಿಯನ್ನು ಸಲ್ಲಿಸಿರುತ್ತಾಳೆ. ದಿಃ 27-10-2021 ರಂದು ಚಾಸಾ-9 ರವರು ಘಟನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿ ಫೋಟೋ ತೆಗೆದಿರುತ್ತಾರೆ. ಪೋಲಿಸರಿಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಗಳನ್ನು ನೋಡಿ ಗುರುತಿಸಿರುತ್ತಾರೆ.

<u>**ಪಾಟೀ ಸವಾಲುಃ**</u> ಆರೋಪಿಗಳ ಪರ ಶ್ರೀ. ಯು. ಬಿ. ಜೆ. ವಕೀಲರಿಂದಃ

ಸರ್ವೆ ನಂಃ 3/1 ನನ್ನ ಹೆಸರಿಗೆ ಇರುತ್ತದೆ. ಸರ್ವೇ ನಂಃ ¾ ಯಾರ ಹೆಸರಿಗೆ ಇರುತ್ತದೆ ಎಂದು ಗೊತ್ತಿರುವುದಿಲ್ಲ. ನಮ್ಮ ಜಮೀನಿಗೆ ಹೊಂದಿಕೊಂಡು ಪೂರ್ವಕ್ಕೆ ಸಂತೋಷ ಬಸವರಾಜಪ್ಪ ಕೋರಿ ಇವರ ಜಮೀನು, ಪಶ್ಚಿಮಕ್ಕೆ ಕೆರೆ ಇರುತ್ತದೆ, ಉತ್ತರಕ್ಕೆ ಗದಿಗೆಪ್ಪಗೌಡ ದಳವಾಯಿ ಇವರ ಜಮೀನು ಹಾಗೂ ದಕ್ಷಿಣಕ್ಕೆ ಬಸನಗೌಡ ಮರಿಗೌಡ್ರ ಇವರ ಜಮೀನು ಇರುತ್ತದೆ. ನಮ್ಮ ಜಮೀನಿನ ಪಶ್ಚಿಮಕ್ಕೆ ಕೆರೆ ಮತ್ತು ಹೊಂಡ ಇರುತ್ತವೆ. ಹೊಂಡದ ಸುತ್ತಲು ಗಾವಠಾಣ ಜಾಗ ಇರುತ್ತದೆ ಎಂದರೆ ಸರಿಯಲ್ಲ. ಹೊಂಡದ ದಕ್ಷಿಣ ದಿಕ್ಕಿಗೆ ರಸ್ತೆ ಇರುತ್ತದೆ. ಸದರಿ ರಸ್ತೆಯ ಮೂಲಕ ಮುಂದೆ ಇರುವ ಜಮೀನುಗಳ ಮಾಲಕರು ಹೋಗುತ್ತಾರೆ ಎನ್ನುವುದು ನಿಜ. ಸರ್ವೇ ನಂಃ ¾ ಸಂಕನಗೌಡ ಮರಿಗೌಡ್ರ ಇವರ ಜಮೀನು ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಸರ್ವೇ ನಂಃ 3/5 9ನೇ ಆರೋಪಿಯ ಜಮೀನು ಇರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ಸರ್ವೆ ನಂಃ ¾ ಹಾಗೂ 3/5 ರ ಜಮೀನುಗಳಿಗೆ ಹೋಗಲು ಗಾವಠಾಣ ಜಾಗದ ಮೂಲಕ ಹೋಗುತ್ತಾರೆ ಎಂದರೆ ಸರಿಯಲ್ಲ. ಸರ್ವೇ ನಂಃ 3 ರಲ್ಲಿ ನಕಾಶೆ ಕಂಡ ದಾರಿ ಇರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂಃ 3 ರಲ್ಲಿ ದಾರಿ ಇದೆ ಎಂದು ಗದಿಗೆಪ್ಪಗೌಡ ದಳವಾಯಿ ಎನ್ನುವವರು ಈ ಹಿಂದೆ ಕೇಸನ್ನು ಮಾಡಿದ್ದರು ಎನ್ನುವುದು ಗೊತ್ತಿರುವುದಿಲ್ಲ. ಹೊಂಡದ ಸುತ್ತಲು ಗಾವಠಾಣ ಜಾಗೆಯಲ್ಲಿ ಯಾರು ತಿಪ್ಪೇಯನ್ನು ಹಾಕಿಲ್ಲ. ನಮ್ಮ ಜಾಗೆಯಲ್ಲಿ ತಿಪ್ಪೆಯನ್ನು ಹಾಕಿರುವುದಕ್ಕೆ ಈ ಮೊದಲು ದಾವೆಯನ್ನು ಸಲ್ಲಿಸಿರಲಿಲ್ಲ, ಈಗ 6 ತಿಂಗಳ ಹಿಂದೆ ದಾವೆಯನ್ನು ಸಲ್ಲಿಸಿರುತ್ತೇನೆ. ಸರ್ವೇ ನಂಃ 3/1 ಕ್ಕೆ ಹೊಂದಿ ಪಂಚಾಯತಿಯವರು ಗಟಾರ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಗಟಾರ ಇರುತ್ತದೆ. ಗಟಾರದಿಂದ ಪೂರ್ವ ದಿಕ್ಕಿಗೆ ನನ್ನ ಜಮೀನು ಇರುತ್ತದೆ ಎಂದರೆ ಸರಿಯಲ್ಲ. ನಾನು ಪಂಚಾಯತಿ ಅಧ್ಯಕ್ಷ ಇದ್ದೆ ಎನ್ನುವುದು ನಿಜ. ಚಾಸಾ-1 ಈ ಹಿಂದೆ ಗ್ರಾಮ ಪಂಚಾಯಿತಿ

ಸದಸ್ಯ ಇದ್ದಳು. ನನ್ನ ಮೊದಲನೆ ಹೆಂಡತಿ ಗಂಗಮ್ಮ ಜೀವಂತ ಇರುತ್ತಾಳೆ. ನಾನು ಪಂಚಾಯಿತಿ ಅಧ್ಯಕ್ಷನಿದ್ದಾಗ ಹೊಂಡದ ಸುತ್ತ ಮುತ್ತಲೂ ಹಾಕಿದಂತಹ ತಿಪ್ಪೆಗಳನ್ನು ತೆರವುಗೊಳಿಸಬೇಕೆಂದು ನೋಟಿಸನ್ನು ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸರ್ವೆ ನಂಃ 3/1 ಹಾಗೂ ಹೊಂಡದ ಮಧ್ಯ ಇದ್ದಂತಹ ಗಾವಠಾಣ ಜಾಗವನ್ನು ನಾನು ಒತ್ತುವರಿ ಮಾಡಿದ್ದರಿಂದ ಗ್ರಾಮಸ್ಥರು ಪಂಚಾಯಿತಿಗೆ ತಕರಾರನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅದಕ್ಕೆ ನಾನು ತಿಪ್ಪೆ ಹಾಕಿದವರನ್ನು ಬಿಡಿಸಿದರೆ ನಾನು ಒತ್ತುವರಿ ಮಾಡಿರುವುದನ್ನು ವಾಪಸ್ಸು ಕೊಡುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿಃ 24-08-2021 ರಂದು ಟಿಲ್ಲರ ಬಿದ್ದ ಬಗ್ಗೆ ಪೋಲಿಸರಿಗೆ ಪಿರ್ಯಾದಿಯನ್ನು ಕೊಟ್ಟಿಲ್ಲ. ಗಲಾಟೆಯಾದ ದಿನ ರಾತ್ರಿಯಾಗಿದ್ದರಿಂದ ಪಿರ್ಯಾದಿಯನ್ನು ಕೊಟ್ಟಿಲ್ಲ, ಮರುದಿನ ಕೊಟ್ಟೇವು. ಮರುದಿನ ಪೋಲಿಸ ಠಾಣೆಗೆ ಬಂದು ಪಿರ್ಯಾದಿಯನ್ನು ಬರೆದುಕೊಟ್ಟು ಆಸ್ಪತ್ರೆಗೆ ಹೋಗಿರುತ್ತೇವೆ. ಸದರಿ ಪಿರ್ಯಾದಿ ಕೊಟ್ಟ ಬಗ್ಗೆ ಪೋಲಿಸರು ದಾಖಲೆ ಕೊಟ್ಟಿಲ್ಲ. ಆಸ್ಪತ್ರೆಯಿಂದ ಪಿರ್ಯಾದಿಯನ್ನು ಕೊಡಿಸಲು ಪ್ರಯತ್ನ ಮಾಡಿರುತ್ತೇವೆ, ಆದರೆ ಆ ದಿನ ಬಂದೋಬಸ್ತಗೆ ಹೋಗಿರುತ್ತಾರೆ. ಇದೇ ನ್ಯಾಯಾಲಯದಲ್ಲಿ ನನ್ನ ಮೇಲೆ 2 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು ಎಂದರೆ ಸರಿಯಲ್ಲ. ಈ ಹಿಂದೆ ಒಂದು ಪ್ರಕರಣದಲ್ಲಿ ನಾವು ರಾಜೀ ಮಾಡಿಕೊಂಡು ಹೋಗಿರುತ್ತೇವೆ ಎನ್ನುವುದು ನಿಜ. ಸದರಿ ಪ್ರಕರಣದಲ್ಲಿ ಯಾರು ಪಿರ್ಯಾದಿ ಕೊಟ್ಟಿದ್ದರು ಎಂದು ನೆನಪಿರುವುದಿಲ್ಲ. ಗಾವಠಾಣ ಜಾಗವನ್ನು ನಾನು ಒತ್ತುವರಿ ಮಾಡಿರುವುದನ್ನು ಬಿಡಿಸಬೇಕೆಂದು 1 ನೇ ಆರೋಪಿ ಗ್ರಾಮ ಪಂಚಾಯತಿಗೆ ಅರ್ಜಿಯನ್ನು ಕೊಟ್ಟಿರುತ್ತಾನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಅರ್ಜಿಯನ್ನು ಕೊಟ್ಟಿದ್ದರಿಂದ ನನ್ನ ಹೆಂಡತಿಯ ಮೂಲಕ ಸುಳ್ಳು ಪಿರ್ಯಾದಿಯನ್ನು ಕೊಡಿಸಿರುತ್ತೇನೆ ಎಂದರೆ ಸರಿಯಲ್ಲ. ಪೋಲಿಸರು ಬಂದಾಗ ದೊಣ್ಣೆಯನ್ನು ತೋರಿಸಿರುತ್ತೇವೆ. ಚಾಸಾ-1 ಹಸಿರು ಬಣ್ಣದ ಸೀರೆಯನ್ನು ಉಟ್ಟುಕೊಂಡಿದ್ದಳು. ಚಾಸಾ-5 ರವರು ಆ ದಿನ ನೈಟಿಯನ್ನು ಹಾಕಿಕೊಂಡಿದ್ದಳು. ಪಿರ್ಯಾದಿಯಲ್ಲಿ ಚಾಸಾ-5 ಸೀರೆಯನ್ನು ಉಟ್ಟುಕೊಂಡಿದ್ದಳು ಎಂದು ಬರೆಸಿರುತ್ತಾಳೆ ಎಂದು ಗೊತ್ತಿರುವುದಿಲ್ಲ. ಗಲಾಟೆ 5-00 ರಿಂದ 6-00 ಗಂಟೆಯವರೆಗೆ ಆಗಿರುತ್ತದೆ. ಗಲಾಟೆಯ ದಿನ ಅಲ್ಲಿ ಸಾರ್ವಜನಿಕರು ಎಷ್ಟು ಜನರು ಸೇರಿದ್ದರು ಎನ್ನುವುದು ಗೊತ್ತಿಲ್ಲ. ಪಿರ್ಯಾದಿಯನ್ನು ನಾನೇ ಹೇಳಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಆ ದಿನ 1 ನೇ ಆರೋಪಿ ದೊಣ್ಣೆಯಿಂದ ನನಗೆ ಹೊಡೆದಿಲ್ಲ, ಉಳಿದ ಆರೋಪಿಗಳು ಸೀರೆಯನ್ನು ಹಿಡಿದು ಎಳೆದಾಡಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾರು ಸಹ ನಮಗೆ ಜೀವದ

ಬೆದರಿಕೆಯನ್ನು ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಮೇಲೆ ಸಿವಿಲ್ ದಾವೆಯನ್ನು ಸಲ್ಲಿಸಿ ತೊಂದರೆಯನ್ನು ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಆರೋಪಿಗಳು ನನಗೆ ಹೊಡೆದಿಲ್ಲ, ಜೀವದ ಬೆದರಿಕೆಯನ್ನು ಹಾಕಿಲ್ಲ, ಅವರ ಮೇಲೆ ಪಿರ್ಯಾದಿಯನ್ನು ಕೊಟ್ಟರೆ ಗಾವತಾಣ ಜಾಗಕ್ಕೆ ಬರುವುದಿಲ್ಲ ಎನ್ನುವ ಕಾರಣ ಸುಳ್ಳು ಪಿರ್ಯಾದಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಹೆಣ್ಣು ಮಕ್ಕಳನ್ನು ಸೇರಿಸಿ ಪಿರ್ಯಾದಿಯನ್ನು ಕೊಟ್ಟರೆ ಅವರು ಬಗ್ಗುತ್ತಾರೆ ಎಂದು ಹೆಣ್ಣು ಮಕ್ಕಳನ್ನು ಸೇರಿಸಿ ಪಿರ್ಯಾದಿಯನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನನ್ನ ಹೆಂಡತಿಯ ಮೂಲಕ ಪಿರ್ಯಾದಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು )

ಓ ಹೆ ಕೆ ಸರಿ ಇದೆ ಎಂದು ಒಪ್ಪಿರುತ್ತಾರೆ.

ದಿನಾಂಕಃ 27-02-2024

Sd/-
ಹಿರಿಯ ಸಿ ಜೆ ಮತ್ತು ಜೆ. ಎಂ.ಎಫ್. ಸಿ,
ಹಿರೇಕೆರೂರು